38

# ಯಶಸ್ವಿಯಲ್ಲಿರುವ ಅಪಾಯ

### ಓದುವ ಮನೆಪಾಠ #15

V. ಎರಡನೇ ಪಸ್ಕದಿಂದ ಮೂರನೆಯದಕ್ಕೆ (ಮುಂದುವರೆಯುವದು).
   V. ಯೇಸುವಿನ ಗಲಿಲಾಯದ ಮೂರನೇ ಪ್ರಯಾಣ ಹನ್ನೆರಡು ಶಿಷ್ಯರಿಗೆ ಮಾರ್ಗದರ್ಶನ (ಮತ್ತಾಯ 9:35-38; 10:1-42;[1] 11:1; ಮಾರ್ಕ 6:6-13; ಲೂಕ 9:1-6).
   W. ಯೇಸುವಿಗಾಗಿ ಹೆರೋದನಲ್ಲಿದ್ದ ಆಸಕ್ತಿ (ಯೋಹಾನನ ಮರಣದ ವಿಚಾರ) (ಮತ್ತಾಯ 14:1-12; ಮಾರ್ಕ 6:14-29; ಲೂಕ 9:7-9).
   X. ಹೆರೋದನ ಕ್ಷೇತ್ರದಿಂದ ಯೇಸುವಿನ ವರ್ಗಾವಣೆ (ಮತ್ತು ಹಿಂದಿರುಗಿದ್ದು).
      1. ಗಲಿಲಾಯದ ಸೇವೆಯ ಅಂತ್ಯ ಹಾಗೂ ಹನ್ನೆರಡು ಜನರು ಹಿಂದಿರುಗಿದ್ದು (ಮತ್ತಾಯ 14:12ಬಿ, 13; ಮಾರ್ಕ 6:30-32; ಲೂಕ 9:10; ಯೋಹಾನ 6:1).

### ಪರಿಚಯ

ಗಲಿಲಾಯದ ಮಹಾ ಸೇವೆಯ ಅಂತ್ಯದಲ್ಲಿ ನಾವಿದ್ದೇವೆ. ಇಲ್ಲಿ ಯೇಸು ಮತ್ತು ಆತನ ಶಿಷ್ಯರು ಮಾಡಿದ ಗಲಿಲಾಯದ[2] ಅಂತಿಮ ಪ್ರಯಾಣದ ಕುರಿತು ನೋಡಲಿದ್ದೇವೆ. ಅದು ಯಶಸ್ವಿಯ ಪ್ರಯಾಣವಾದರೂ, ಆ ಯಶಸ್ವಿಯ ಮೂಲಕ ಆ ದೇಶವನ್ನು[3] ಆಳದ್ದೆ ಹೆರೋದನಿಗೆ, ಯೇಸುವಿನ ವಿಚಾರವು ತಿಳಿದು ಬಂತು. ಅರಸನಾದ ಹೆರೋದನು ಈಗಾಗಲೇ ಸ್ನಾನಿಕನಾದ ಯೋಹಾನನ ತಲೆಯನ್ನು ಕತ್ತರಿಸಿದನು, ಆದ್ದರಿಂದ ಪರಿಸರವು ಗೊಂದಲಮಯವಾಗಿತ್ತು. ಶಿಷ್ಯರೆಲ್ಲರೂ ಆ ಪ್ರದೇಶದಲ್ಲಿ ಪ್ರಯಾಣ ಮಾಡಿದ ನಂತರ, ಅವರು ಅರಸನ ಸರಹದ್ದನಿಂದ ದೂರಹೋದರು - ಅಂದರೆ ಗಲಿಲಾಯ ಸಮುದ್ರದ ಪೂರ್ವದಿಕ್ಕಿಗೆ ಬಂದಿಳಿದರು. ಅಲ್ಲಿ ಯೇಸು ಐದು ಸಾವಿರಕ್ಕಿಂತ ಅಧಿಕವಾದ ಜನರಿಗೆ ಊಟ ನೀಡಿದ್ದನು.[4] ಇದರ ನಿಮಿತ್ತ ಯೇಸು ಬಹು ಪ್ರಖ್ಯಾತಿಗೊಂಡಿದ್ದನು.

ಐದು ಸಾವಿರ ಜನರಿಗೆ ಬಡಿಸಿದ ಊಟದ ಬಗ್ಗೆ, ಇತರ ಘಟನೆಗಳ ಬಗ್ಗೆ ಮಂದಿರ ಪಾಠದಲ್ಲಿ ವಿವರಿಸುತ್ತೇನೆ. ಈ ಪಾಠದಲ್ಲಿ ಗಲಿಲಾಯದ ಯಶಸ್ವಿ ಪ್ರಯಾಣದ ಮತ್ತು ಅದರಿಂದಾದ ಕ್ರಿಸ್ತನಿಗೂ ಆತನ ಶಿಷ್ಯರಿಗೂ ಉಂಟಾದ ಕೆಡುಕಿನ ಬಗ್ಗೆ ನೋಡೋಣ.

## ಒಂದು ಯಶಸ್ವಿ ಪ್ರವಾಸ (ಮತ್ತಾಯ 9:35-38; 10:1-42; 11:1; ಮಾರ್ಕ 6:6-13; ಲೂಕ 9:1-6)

### ಸೇವೆಯ ವಿಸ್ತಾರ (ಮತ್ತಾಯ 9:35-38; ಮಾರ್ಕ 6:6)

ಹೆಚ್ಚು ಸಮಯವಿಲ್ಲದ್ದರಿಂದ, ಜನರು ಆತನನ್ನು ಹಿಂಬಾಲಿಸುವದಕ್ಕೆ ಮತ್ತೊಂದು ಅವಕಾಶವನ್ನು ನೀಡುವ ಸಲುವಾಗಿ, ಯೇಸು ಗಲಿಲಾಯಕ್ಕೆ ಹೋದನು. ಮಾರ್ಕ 6:6ಬಿ ಪ್ರಕಾರ, "ಆತನು ಹಳ್ಳಿಪಳ್ಳಿಗಳನ್ನು ಸುತ್ತಿಕೊಂಡು ಉಪದೇಶಮಾಡುತ್ತಾ ಬಂದನು. ಮತ್ತಾಯನು ಇದರ ಕುರಿತು ಹೆಚ್ಚಿನ ಸಾರಾಂಶವನ್ನು ನೀಡಿ, ಯೇಸು ಎಲ್ಲಾ ಊರುಗಳನ್ನು

ಹಳ್ಳಿಪಳ್ಳಿಗಳನ್ನು ಸುತ್ತಿಕೊಂಡು: "ಆಗ ಆ ಮೋಡದೋಳಗಿಂದ - ಈತನು ನನ್ನ ಮಗನು. ನಾನು ಆರಿಸಿ ಕೊಂಡವನು; ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು" (ಲೂಕ 9:35).

ತನ್ನ ಮಾತನ್ನು ಕೇಳುವದಕ್ಕೆ ಬಂದವರಿಗೆ, "ಅವರು ಕುರುಬನಿಲ್ಲದ ಕುರಿಗಳ ಹಾಗೆ ತೊಳಲಿ ಬಳಲಿ ಹೋಗಿದ್ದಾರಲ್ಲಾ" ಅಂದನು (ಮತ್ತಾಯ 9:36).[5] ಆತ್ಮೀಕ ನಾಯಕತ್ವದ ದೆಸೆಯಿಂದ ಬಳಲಿದ ಹಳೆಒಡಂಬಡಿಕೆಯ ದೇವ ಜನರನ್ನು ಕುರಿತು ಸಹ ಇದೇ ವ್ಯಾಖ್ಯಾನವನ್ನು ಮಾಡಲಾಗಿದೆ (ಅರಣ್ಯಕಾಂಡ 27:17; 1 ಅರಸು 22:17; 34:5).

ಈ ಹಿಂದೆ ಯೇಸು ಸಮಾರ್ಯದವರ ಕುರಿತಾಗಿ, ತನ್ನ ಶಿಷ್ಯರೊಂದಿಗೆ ಮಾತನಾಡಿ "ಕಣ್ಣೆತ್ತಿ ಹೊಲಗಳನ್ನು ನೋಡಿರಿ, ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳು ತ್ತೇನೆ" (ಯೋಹಾನ 4:35ಬಿ). ಇಲ್ಲಿ ಗಲಿಲಾಯದವರನ್ನು ಸೂಚಿಸುವಂತೆ ಮಾಡಿದ್ದಾನೆ. "ಬೆಳೆಯು ಬಹಳವೆಂದರೆ ಕೆಲಸಗಾರರು ಕಡಿಮೆ" (ಮತ್ತಾಯ 9:37) ಎಂದು ಸಹ ಹೇಳಿ ರುವನು. ಆದ್ದರಿಂದ "ನಿನ್ನ ಬಳಿಗೆ ಕೆಲಸದವರನ್ನು ಕಳುಹಿಸು ಎಂದು ಬೇಡಿಕೊಳ್ಳಿರಿ" (9:38). ತನ್ನ ಜನರನ್ನು ಸಂದಿಸಲು, ಯೇಸುವಿಗೆ ಜನರ ಸಹಾಯದ ಅಗತ್ಯವಿತ್ತು.

### ಪ್ರಶ್ನೆಗೆ ಸರಿಯಾದ ಪರಿಹಾರ

### (ಮತ್ತಾಯ 10:1-42; ಮಾರ್ಕ 6:7-11; ಲೂಕ 9:1-5)

ಯೇಸುವಿನ ಸ್ಥಳದಲ್ಲಿ, "ಬೆಳೆಯು ಬಹಳವಾಗಿ, ಕೆಲಸಗಾರರು ಸ್ವಲ್ಪವೇ ಇದ್ದದರಿಂದ ತನ್ನ ಹನ್ನೆರಡು ಜನ ಶಿಷ್ಯರನ್ನು ಆತನು ಕೆಲಸ ಮಾಡಲು ಕಳುಹಿಸಿದನು. ಪ್ರತಿ ಸ್ಥಳದವರು ದವರ ರಾಜ್ಯದ ಸಂದೇಶವನ್ನು ಕೇಳುವಂಥ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದನು" (ಮತ್ತಾಯ 9:35). ಎರಡನೆಯದಾಗಿ, ಶಿಷ್ಯರಿಗೆ ಅತ್ಯುತ್ತಮವಾದ ತರಬೇತಿಯನ್ನು ನೀಡಿದನು - ತಾನು ಇಲ್ಲದೆ ಇರುವ ಪರಿಸ್ಥಿತಿಯಲ್ಲಿ, ಆತನ ಕೆಲಸವನ್ನು ಮುಂದುವರೆಸುವಂಥ ಅನುಭವವನ್ನು ಹನ್ನೆರಡು ಜನ ಶಿಷ್ಯರಿಗೆ ನೀಡಿದನು. ಗಲಿಲಾಯದ ಪ್ರಥಮ ಪ್ರಯಾಣದಲ್ಲಿ, ಕೆಲವೇ ಶಿಷ್ಯರನ್ನು ಕರೆದೊಯಿದ್ದು.[7] ಎರಡನೆಯ ಸಾರಿ ಹನ್ನೆರಡು ಶಿಷ್ಯರಿದ್ದರು.[8] ತನ್ನ ವಿಧಾನವನ್ನು ಅವರು ಕಲಿಯಬೇಕೆಂದು ಆತನು ಬಯಸಿದನು. ಅವರನ್ನು ಸ್ವಂತವಾಗಿ ಕಳುಹಿಸುವ ಸಮಯವು ಈಗ ಒದಗಿ ಬಂದಿತು.[9]

ಯಶಸ್ವಿಗೆ ಸಿದ್ಧತೆಯು ಬಲು ಅಗತ್ಯ. ಪ್ರಮುಖ ಕೆಲಸಕ್ಕಾಗಿ ಯೇಸು ತನ್ನ ಶಿಷ್ಯರನ್ನು ಸಿದ್ಧ ಮಾಡಿದನು:

(1) ಅಪೊಸ್ತಲರನ್ನು ಸಿದ್ಧಗೊಳಿಸುವದಕ್ಕಾಗಿ, ಅವರನ್ನು ಕ್ರಮಬದ್ಧ ಪಡಿಸಿದನು. ಅವರನ್ನು ಇಬ್ಬರ ಗುಂಪನ್ನಾಗಿ ಮಾಡಿದನು (ಮಾರ್ಕ 6:7). ಮತ್ತಾಯ 10:2-4ರ ಪಟ್ಟಿಯಲ್ಲಿ ಇಬ್ಬಬ್ಬರ ಗುಂಪುಗಳ ಹೆಸರುಗಳಿವೆ. ಯೇಸು ಅವರನ್ನು ಕಳುಹಿಸಿದ ವಿಧಾನವನ್ನು ಗಮನಿಸಬಹುದು. ಇಬ್ಬಬ್ಬರಾಗಿ ಹೋಗಿದ್ದರಿಂದ, ಅವರು ಸಾರಿದ ಸುವಾರ್ತೆಯು ಫಲಪ್ರದ ವಾಗಿತ್ತು (ಧರ್ಮೋಪದೇಶಕಾಂಡ 17:6; 19:15; ಮತ್ತಾಯ 18:16; ಯೋಹಾನ 8:17; 2 ಕೊರಿಂಥ 13:1; 1 ತಿಮೊಥೆ 5:19). ಅದು ಅವರಲ್ಲಿ ಪರಸ್ಪರ ಬಲವನ್ನು ಸಹ ನೀಡಿತು (ನೋಡಿ ಪ್ರಸಂಗಿ 4:12).

ಅವರು ಇರಬೇಕಿದ್ದ ಸೇವಾಸ್ಥಳಗಳನ್ನು ಸಹ ಕ್ರಿಸ್ತನು ನಿಗದಿತಪಡಿಸಿದ್ದನು. ಯೇಸು "ಅಲ್ಲಿಯವರ ಊರುಗಳಲ್ಲಿ" ಉಪದೇಶಮಾಡಿದನು (ಮತ್ತಾಯ 11:1) ಅಂದರೆ, ಅವರಿಗೆ ನಿಗದಿಪಡಿಸಿದ ಸ್ಥಳಕ್ಕೆ ಯೇಸು ಭೇಟಿ ನೀಡಿದ್ದನು ಎಂಬ ಅರ್ಥ[10] (ಲೂಕ 10:1ನ್ನು ಹೋಲಿಸಿ). ಹಾಗೂ ಅದು ಎಷ್ಟು ಕಾಲ, ಮತ್ತು ಸೇವೆಯ ನಂತರ ಯಾವ ಸ್ಥಳದಲ್ಲಿ ಸಂಧಿಸ ಬೇಕು ಎಂಬ ಯೋಜನೆಯನ್ನು ಸಹ ಯೇಸು ಮಾಡಿದ್ದನು (ನೋಡಿ ಮಾರ್ಕ 6:30; ಲೂಕ 9:10).

(2) ಅವರಿಗೆ ಸಲಹೆ ನೀಡಿ, ಅಪೊಸ್ತಲರನ್ನು ಸಿದ್ಧಪಡಿಸಿದನು.[11] ಈ ಸಲಹೆ ಸೂಚನೆಗಳು, ಸಿದ್ಧತೆಗಾಗಿ ಯೇಸು ನೀಡಿದ ಪ್ರಮುಖ ಅಂಶವಾಗಿತ್ತು.

*ಅವರ ಕಾರ್ಯಗಳನ್ನು ನಿಗದಿ ಪಡಿಸಿದನು.* ಇಸ್ರಾಯೇಲ್ಯರ ಮನೆತನದವರ ಬಳಿಗೆ ಹೋಗಿರಿ ಎಂದು ಅಪ್ಪಣೆ ನೀಡಿದನು (ಮತ್ತಾಯ 10:5, 6). ನಂತರ ಅವರು "ಇತರ ಕುರಿಗಳ" ಬಗೆ ಕರುಣೆ ತೋರಬೇಕಿತ್ತು (ನೋಡಿ ಯೋಹಾನ 10:16). ಅವರು ಪ್ರಯಾಣದ ಸಮಯದಲ್ಲಿ, "ಕುರುಬನಿಲ್ಲದ ಕುರಿಗಳ" ಬಗ್ಗೆ ಚಿಂತಿಸಬೇಕಿತ್ತು (ಮತ್ತಾಯ 9:36) - "ಇಸ್ರಾಯೇಲ್ ಮನೆತನದವರಲ್ಲಿ ಕಳೆದು ಹೋದವರು" (ಮತ್ತಾಯ 10:6).[12]

ಹನ್ನೆರಡು ಜನರು ಯಹೂದ್ಯರ ಬಳಿಗೆ ಹೋದಾಗ, ಅವರಿಗೆ ಉಪದೇಶ ಮಾಡಬೇಕಿತ್ತು "ಪರಲೋಕ ರಾಜ್ಯವು ಸಮೀಪವಾಯಿತು" ಎಂದು ಸಾರಬೇಕಿತ್ತು (ಮತ್ತಾಯ 10:7). ಜನರು ಮಾನಸಾಂತರ ಪಡುವಂತೆ ಕರೆ ನೀಡಬೇಕಿತ್ತು (ಮಾರ್ಕ 6:12; ನೋಡಿ ಮತ್ತಾಯ 4;17). ಅವರು ಯೇಸುವಿನ ಕುರಿತು ಜನರಿಗೆ ಹೇಳಬೇಕಿತ್ತು.[13]

ಪ್ರಯಾಣ ಮಾಡಿ ಉಪದೇಶ ಮಾಡುತ್ತಾ "ಅದ್ಭುತಗಳನ್ನು" ಸಹ ಮಾಡಬೇಕಿತ್ತು (ನೋಡಿ ಲೂಕ 9:6). ಯೇಸು ಅವರಿಗೆ, "ರೋಗಿಗಳನ್ನು ಸ್ವಸ್ಥ ಮಾಡಿರಿ, ಸತ್ತವರನ್ನು ಬದುಕಿಸಿರಿ,[14] ಕುಷ್ಟ ರೋಗಿಗಳನ್ನು ಗುಣಪಡಿಸಿರಿ, ದೆವ್ವಗಳನ್ನು ಬಿಡಿಸಿರಿ" ಎಂದು ಅಪ್ಪಣೆ ಮಾಡಿದನು (ಮತ್ತಾಯ 10:8ಎ). ಇದರ ಕುರಿತು ಕ್ಷಣದಲ್ಲಿಯೇ ತಿಳಿಸುತ್ತೇನೆ.

*ಅವರು ತಮ್ಮ ಸಂಗಡ ತೆಗೆದುಕೊಂಡು.* ಹೋಗಬೇಕಾದ ವಸ್ತುಗಳ ಕುರಿತು ತಿಳಿಸಿದನು. ಅವರಿಗೆ ದೊರಕಬಹುದಾದ ಅತಿಥಿಸತ್ಕಾರದ ಆಧಾರಕ್ಕೆ ಅನುಗುಣವಾಗಿ ವಸ್ತುಗಳನ್ನು ಕೊಂಡೊಯ್ಯಬೇಕಿತ್ತು.[15] "ಆಳು ಅಂಬಲಿಗೆ ಯೋಗ್ಯನಷ್ಟೆ" (ಮತ್ತಾಯ 10:10ಬಿ). ಕೆಲಸಕ್ಕನುಗುಣವಾಗಿ ಅವರು ಚಿಂತನೆ ಮಾಡಬೇಕಿತ್ತು. ಅವರ ಅಗತ್ಯಗಳಿಗಾಗಿ ಕರ್ತನನ್ನೆ ಅವಲಂಭಿಸಬೇಕು ಎಂದು ಯೇಸು ಅವರಿಗೆ ತಿಳಿಸಿಕೊಟ್ಟನು (ಲೂಕ 22:35; ಮತ್ತಾಯ 6:33).

*ಏನನ್ನು ಬಯಸಬೇಕು ಎಂದು ಸಹ ತಿಳಿಸಿರುವನು.* ಕೆಲವರು ಅವರು ತಿಳಿಸಿದ ಸಂದೇಶಗಳನ್ನು ಒಪ್ಪಿಕೊಂಡರು (ಮತ್ತಾಯ 10:11, 13ಎ). ಅನೇಕರು ಅದನ್ನು ನಿರಾಕರಣೆ ಮಾಡುವವರಿದ್ದರು (ಮತ್ತಾಯ 10:13ಬಿ, ವಚನಗಳು 14, 16, 17, 21, 22, 24, 25).

*ಹೇಗೆ ಪ್ರತಿಕ್ರಿಯಿಸಬೇಕೆಂದು ಆತನು ತಿಳಿಸಿಕೊಟ್ಟನು.* ಅಲ್ಲಿ ಅವರು ಹಲವಾರು ಸಂಗತಿಗಳನ್ನು ಮಾಡಬಾರದಿತ್ತು. ಅವರನ್ನು ಅವರ ಸಂದೇಶವನ್ನು ನಿರಾಕರಿಸಿದವರ ಮಧ್ಯದಲ್ಲಿ ಸಮಯ ವ್ಯರ್ಥ ಮಾಡಬಾರದಿತ್ತು, "ಯಾರಾದರೂ ನಿಮ್ಮನ್ನು ಸೇರಿಸಿಕೊಳ್ಳದೆಯೂ ನಿಮ್ಮ ವಾಕ್ಯಗಳನ್ನು ಕೇಳದೆಯೂ ಹೋದರೆ ನೀವು ಆ ಮನೆಯನ್ನಾಗಲಿ ಆ ಊರನ್ನಾಗಲಿ ಬಿಟ್ಟು ಹೊರಡುವಾಗ ನಿಮ್ಮ ಕಾಲಿಗೆ ಹತ್ತಿದ ಧೂಳನ್ನು ಝಾಡಿಸಿಬಿಡಿರಿ" (ಮತ್ತಾಯ 10:14). ಕಾಲಿನ ದೂಳನ್ನು ಕೊಡುವುದು, ಅಂದಿನ ಕಾಲದಲ್ಲಿ ನಿರಾಕರಣೆಯ ಸಂಕೇತವಾಗಿತ್ತು.[16] ದೇವರನ್ನು ನಿರಾಕರಿಸಿದವರನ್ನು ದೇವರು ತಾನೇ ನಿರಾಕರಿಸುವದು ಎಂಬ ಸಂಕೇತ.

ನಿರಾಕರಣೆಯಿಂದ ಅವರು ಭ್ರಮೆಗೊಳ್ಳಬಾರದಿತ್ತು (ಮತ್ತಾಯ 10:26, 28). ನಂಬಿಕೆಯ ಕುರಿತು ಬದಲಾಗಿ ಸಾಕ್ಷಿ ಹೇಳಿರಿ ಎಂಬ ಸವಾಲನ್ನು ಯೇಸು ನೀಡಿದನು (ಮತ್ತಾಯ 10:27) ಮತ್ತು ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, "ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು" ಎಂಬ ವಾಗ್ದಾನವನ್ನು ನೀಡಿದನು (ಮತ್ತಾಯ 10:32, 33). ಹೌದು ದಿನನಿತ್ಯದ ಇಂಥಹ ಅರಿಕೆಗಳಲ್ಲಿ (ನಿರಾಕರಣೆ) ಉಂಟಾದರು,[17] ಅಭ್ಯಾಸದ ಅಗತ್ಯತೆ ಇರುತ್ತದೆ.

ನಿರಾಕರಿಸಲ್ಪಟ್ಟಾಗ ಹನ್ನೆರಡು ಜನರು ಮಾಡಬೇಕಾದ ಸಂಗತಿಗಳಿದ್ದವು. ಅವರು

ಮನುಷ್ಯರಿಂದ ನಿರಾಕರಿಸಲ್ಪಟ್ಟರೂ, ದೇವರ ನಿರಾಕರಣೆಗೆ ಒಳಗಾಗಿರಲಿಲ್ಲ. ಆತನು ಅವರಿಗಾಗಿ ಚಿಂತಿಸುವವನಾಗಿದ್ದನು (ಮತ್ತಾಯ 10:29-31). ಅವರ ನಿರಾಕರಣೆಯು ಅವರನ್ನು ಕಳುಹಿಸಿದ್ದವನ ನಿರಾಕರಣೆಯಾಗಿತ್ತು (ನೋಡಿ ಮತ್ತಾಯ 10:40). ಅವರನ್ನು ಸ್ವೀಕರಿಸಿದವರು ಆಶೀರ್ವಾದ ಪಾತ್ರರಾದರೆ, ನಿರಾಕರಿಸಿದವರು ಶಾಪಕ್ಕೆ ಒಳಗಾಗುತ್ತಿದ್ದರು (ಮತ್ತಾಯ 10:13-15).

(3) ಅಪೊಸ್ತಲರನ್ನು ಸಿದ್ಧಪಡಿಸುವದರಲ್ಲಿ, ಅವರನ್ನು ಕ್ರಮಬದ್ಧಪಡಿಸಿದ್ದು ಹಾಗೂ ಸಲಹೆ ನೀಡಿದ್ದು ಮಾತ್ರವಲ್ಲದೆ, ಅವರನ್ನು ಶಕ್ತಿಯಿಂದ ತುಂಬಿಸಿದನು. ಗುರಿಸಾಧನೆ ಹೇಗೆ ಎಂದು ತಿಳಿಸಿಕೊಟ್ಟನು. ಆ ದೇಶದ ಅಲ್ಪ ಸಮಯದಲ್ಲಿ ಮಾತ್ರ ಯೇಸು ಮಹತ್ಕಾರ್ಯಗಳನ್ನು ಮಾಡಿ, ಮುಂದಿನದನ್ನು ತನ್ನ ಶಿಷ್ಯರು ಮುಂದುವರಿಸಲು ಅಪ್ಪಣೆ ನೀಡಿದನು: "ಮತ್ತು ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಹತ್ತರಕ್ಕೆ ಕರೆದು ದೆವ್ವಗಳನ್ನು[18] ಬಿಡಿಸುವದಕ್ಕೂ ಎಲ್ಲಾ ತರಹ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುವದಕ್ಕೂ ಅವರಿಗೆ ಅಧಿಕಾರ ಕೊಟ್ಟನು" (ಮತ್ತಾಯ 10:1; ನೋಡಿ ಮಾರ್ಕ 6:7; ಲೂಕ 9:1). ನಂತರ ಪ್ರೇರಣೆಯ ವಾಗ್ದಾನವನ್ನು ನೀಡಿದನು:

> ಆದರೆ ಅವರು ನಿಮ್ಮನ್ನು ಒಪ್ಪಸಿಕೊಡುವಾಗ ಹೇಗೆ ಮಾತಾಡಬೇಕು ಏನು ಹೇಳ ಬೇಕು ಎಂದು ಚಿಂತೆಮಾಡಬೇಡಿರಿ; ಆಡತಕ್ಕ ಮಾತು ಆ ಗಳಿಗೆಯಲ್ಲಿ ನಿಮಗೆ ಸೂಚನೆಯಾಗುವದು. ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು (ಮತ್ತಾಯ 10:19, 20).

ಯೇಸು ಅಪೊಸ್ತಲರನ್ನು ಸಿದ್ಧಪಡಿಸಿದ ಕ್ರಮವನ್ನು ಚರ್ಚಿಸಿದ ನಂತರ, ಅವರು ಎರಡು ಅಥವಾ ಮೂರು ವಾರಗಳ ಕಾಲದ ಗಲಿಲಾಯ ಪ್ರಾಂತದ ಸೇವೆಯ ಯೋಜನೆಯನ್ನು ಹೊಂದಿದ್ದರು. ನನ್ನ ನಿಮಿತ್ತವಾಗಿ ನಿಮ್ಮನ್ನು "ಅಧಿಪತಿಗಳ," "ಅರಸುಗಳ" ಮುಂದಕ್ಕೂ ಹಾಗೂ "ಅನ್ಯ ಜನರ" ಮುಂದಕ್ಕೂ (ಮತ್ತಾಯ 10:18) ತೆಗೆದುಕೊಂಡು ಹೋಗುವರು. ಎಂಬ ಹಿಂಸೆಯೇ ಕುರಿತು ಮುಂದಾಗಿ ಅವರಿಗೆ ತಿಳಿಸಿದನು (ಮತ್ತಾಯ 10:17, 18, 21-23, 34-39). ಸಭೆಯ ನಿರ್ಮಾಣದಲ್ಲಿ[19] ಅಗಲಿರುವ ಸಮಸ್ಯೆಯ ಬಗ್ಗೆ ಮುಂತಿಳಿಸಿದನು.

ಮತ್ತಾಯ 10ರಲ್ಲಿ, ಮಿತಿಯುಳ್ಳ ಆದೇಶವನ್ನು[20] ನೀಡಿ, ಮತ್ತಾಯ 28:18-20ರಲ್ಲಿ[21] ಸವಿವರವಾದ ಆದೇಶವನ್ನು ನೀಡಿರುವನು. "ಇದನ್ನು ಮಾಡಿರಿ ಅಂದನಷ್ಟೆ."[22] ಈಗ ಆತನು ಮತ್ತಾಯ 10ರಂತೆ ಸಕಲ ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳಿ ಮುಗಿಸಿದನು.

ಮತ್ತಾಯ 10ರಲ್ಲಿನ ಕೆಲವು ವಿಚಾರಗಳು ಈ ದಿನದಲ್ಲಿ ನಮಗೆ ಅನ್ವಯವಾಗುವದಿಲ್ಲ. ನಾವು ಯೆಹೂದ್ಯರಿಗೆ ಮಾತ್ರ ಮೀಸಲಾಗಿರುವದಿಲ್ಲ (ಮತ್ತಾಯ 28:19; ಮಾರ್ಕ 16:15). ಅಪೊಸ್ತಲರಿಗೆ ಮಾತ್ರ ಅದ್ಭುತ ಮಾಡುವ ಶಕ್ತಿ ನೀಡಲಾಗಿತ್ತು. ನಾವುಗಳು ಮಾತನಾಡುವಾಗ ಅದ್ಭುತ ಶಕ್ತಿಯು ಪ್ರೇರಣೆಯನ್ನು ಹೊಂದಿರುವದಿಲ್ಲ. ನಾವುಗಳು ಪ್ರಸಂಗ ಮಾಡುವದಕ್ಕಾಗಿ, ಹೋಗುವಾಗ ಏನೋ ತೆಗೆದುಕಂಡು ಹೋಗದೆ ಇರುವ ಪರಿಸ್ಥಿತಿ ಇರುವದಿಲ್ಲ.[23] ಹೇಗೂ, ಮತ್ತಾಯ 10ರಲ್ಲಿರುವ ಸೂತ್ರಗಳು ಇಪ್ಪತ್ತೊಂದನೇ ಶತಮಾನಕ್ಕೂ ಅನ್ವಹಿಸುತ್ತವೆ.

ಲೋಕಕ್ಕೆ ಸುವಾರ್ತೆಯನ್ನು ಸಾರುವ ಮೊದಲು, ಯೋಜನೆ ಮತ್ತು ತರಬೇತಿ ಅಗತ್ಯವಿದೆ. ಯೇಸು ನೀಡಿದ ತರಬೇತಿ ವಿಸ್ತಾರವಾಗಿರಲಿಲ್ಲ. ಹಾಗೆಯೇ ನಮ್ಮ ತರಬೇತಿಗಳು ಸಹ ಸರಳ ಹಾಗೂ ಅರ್ಥಗರ್ಭಿತವಾಗಿರಬೇಕು. ಕೆಲಸಕ್ಕೆ ಅನುಗುಣವಾದ ಸಂಘಟನೆ ಇರಬೇಕು. ಅನೇಕ ಸಾರಿ "ಸಂಘಟನೆಗೆ" ಅತಿ ಹೆಚ್ಚು ಆದ್ಯತೆಯನ್ನು ನೀಡಿ, ಕೆಲಸವನ್ನೇ ಮಾಡುವದಿಲ್ಲ. ಸಹಜ ಜ್ಞಾನವು ದೈನಂದಿನ ಆದೇಶವಾಗಿರುತ್ತದೆ. ಮತ್ತಾಯ 10:16ರ ವಿವೇಕ ವನ್ನು ಪರಿಗಣಿಸಿರಿ.

ಯೇಸು ಅಪೋಸ್ತಲರನ್ನು ಇಬ್ಬಿಬ್ಬರಾಗಿ ಕಳುಹಿಸಿದೆ ಸೇವೆ ಕ್ರಮವನ್ನು ನಾವುಗಳು

ಅನುಸರಿಸಲೇಬೇಕು. ಸೇವಕರನ್ನು ಗುಂಪಾಗಿ ಕಳುಹಿಸುವದರಲ್ಲಿ ಅರ್ಥವಿದೆ.

ಸುವಾರ್ತೆ ಸಾರುವ ಮೊದಲು, ಸಿದ್ಧತೆಯು ಬಹುಮುಖವಾಗಿರುತ್ತದೆ. ಈ ಹನ್ನೆರಡು ಮಂದಿಗೆ "*ಅಪ್ಪಣೆಕೊಟ್ಟು*" ಯೇಸು ಕಳುಹಿಸಿದನು (ವಚನ 5; ಒತ್ತಿ ಹೇಳಿದ್ದು ನನ್ನದು; ಇದನ್ನು ನೋಡಿ 11:1). ಮಾಡುವಂಥ ಕ್ರಮಗಳನ್ನು ಎಲ್ಲರೂ ಬಲ್ಲವರಾಗಿರುತ್ತಾರೆ ಎಂದು ತಿಳಿದುಕೊಳ್ಳ ಬಾರದು. ಸಲಹೆಗಳನ್ನು ಅಲಕ್ಷ್ಯಮಾಡಬೇಡಿರಿ.[24] ಹೌದು ನಾವು ಸುವಾರ್ತೆಯನ್ನು ಸಾರು ವಾಗ, ದೇವರು ನಮ್ಮನ್ನು ಗಮನಿಸುತ್ತೇನೆ ಎಂಬುದನ್ನು ಮರೆಯಬಾರದು (10:28-31). ಅಂತ್ಯದವರೆಗೆ ತಾಳಿಕೊಂಡು ಇರಬೇಕು (ವಚನ 22).

**ಪ್ರಯತ್ನದಲ್ಲಿರುವ ಯಶಸ್ಸು (ಮತ್ತಾಯ 11:1; ಮಾರ್ಕ 6:12, 13; ಲೂಕ 9:6)**

ಯೇಸು ಸಲಹೆ ಸೂಚನೆಗಳನ್ನು ನೀಡಿದ ನಂತರ, ಅಪೊಸ್ತಲರು "ಇಬ್ಬಿಬ್ಬರಾಗಿ" ಆರು ಗುಂಪಿನಲ್ಲಿ ಹೋದರು. "ಅವರು ಹೊರಟು ಹೋಗಿ ಜನರಿಗೆ - ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಸಾರಿ ಅನೇಕ ದೆವ್ವಗಳನ್ನು ಬಿಡಿಸಿ ಅನೇಕ ರೋಗಿಗಳಿಗೆ ಎಣ್ಣೆ ಹಚ್ಚಿ ವಾಸಿಮಾಡಿರು" (ಮಾರ್ಕ 6:12, 13). ಮೊದಲ ಬಾರಿಗೆ ಅವರು, ತಮ್ಮ ಗುರುವು ಮಾಡಿದಂಥ ಮಹತ್ಕಾರ್ಯಗಳನ್ನು ಮಾಡಲು ಆರಂಭಿಸಿದರು. ಅವರು ಬಹಳ ಆನಂದಗೊಂಡಿದ್ದರು![25]

ಅವರು ಹೊರಟ ನಂತರ, ಯೇಸು ಸ್ಥಳೀಯವಾಗಿ ಸಂಚರಿಸಿದನು (ಮತ್ತಾಯ 11:1). ಈಗ ಗಲಿಲಾಯದ ಸುವಾರ್ತಾ ಪ್ರಯಾಣದಲ್ಲಿ ಒಂದು ಗುಂಪಾಗಿದ್ದವರು, ಏಳು ಗುಂಪಾಗಿ ಹೋದರು!

## ಒಂದು ಗಂಭೀರವಾದ ಬೆದರಿಕೆ

## (ಮತ್ತಾಯ 14:1-12ಎ; ಮಾರ್ಕ 6:14-29; ಲೂಕ 9:7-9)

**ಹೆರೋದನು ಇವರ ಬಗ್ಗೆ ಎಚ್ಚರವಹಿಸಿದನು**

ಈ ಹಿಂದೆ ತಿಳಿಸಿದಂತೆ, ಹೆರೋದನು ಗಲಿಲಾಯವನ್ನು ಆಳುತ್ತಿದ್ದನು. ಇವನು ಹೆರೋದ ಮಹಾರಾಜನ[26] ಮಗನಾದ ಹೆರೋದ ಅಂತಿಪನು ಯೇಸು ತನ್ನ ಶಿಷ್ಯರನ್ನು ಸೇವೆಗಾಗಿ ಕಳುಹಿಸುವ ಮುನ್ನ ಹೆರೋದನು ಯೇಸುವಿನ ಬಗ್ಗೆ ಹೆಚ್ಚು ಆಸಕ್ತಿವಹಿಸಿರಲಿಲ್ಲ. ಕ್ರಾಂತಿಕಾರಿಗಳು ಸಮಾಜದಲ್ಲಿ ಗೊಂದಲ ಸೃಷ್ಟಿ ಮಾಡದೆ ಇದ್ದರೆ - ಸಾಮಾನ್ಯವಾಗಿ ಸರ್ಕಾರದವರು ಅವರ ಬಗ್ಗೆ ಹೆಚ್ಚು ಹೆಚ್ಚು ಗಮನವಿಡುವದಿಲ್ಲ. ಆದರೆ ಈಗ ಏಳು ಗುಂಪಿನವರು ಸರಿಹದ್ದನ್ನು ದಾಟಿ, ಎಲ್ಲಾ ಕಡೆಗಳಲ್ಲಿ ಸುವಾರ್ತೆ ಸಾರಲು ಆರಂಭಿಸಿದಾಗ, ಹೆರೋದನು ಅವರ ಕ್ರಾಂತಿಯನ್ನು ಅಲಕ್ಷ್ಯ ಮಾಡಲು ಸಾಧ್ಯವಾಗಲಿಲ್ಲ.

ಮತ್ತಾಯನ ಪ್ರಕಾರ "ಆ ಕಾಲದಲ್ಲಿ ಉಪರಾಜನಾದ ಹೆರೋದನು ಯೇಸುವಿನ ವಿಚಾರವನ್ನು ಕೇಳಿಸಿಕೊಂಡನು" (14:1). ಮಾರ್ಕನ ಪ್ರಕಾರ ಹನ್ನೆರಡು ಅಪೊಸ್ತಲರು ಮಾಡಿದ ಕಾರ್ಯಗಳ ಸಾರಾಂಶವನ್ನು ನೀಡಿ (6:13). "ಅರಸನಾದ ಹೆರೋದನು ಯೇಸುವನ ಸುದ್ದಿಯನ್ನು ಕೇಳಿದನು ಯಾಕಂದರೆ ಯೇಸುವಿನ ಹೆಸರು ಪ್ರಸಿದ್ಧವಾಗಿತ್ತು" (6:14ಎ). ಅಪೊಸ್ತಲರ ಯಶಸ್ಸಿನ ಬಗ್ಗೆ ಲೂಕನು ಸಹ ಬರೆದನು (9:6) ನಂತರ ಅವನು, "ಹೀಗಿರಲಾಗಿ ಉಪರಾಜನಾದ ಹೆರೋದನು ನಡೆದ ಸಂಗತಿಗಳನ್ನೆಲ್ಲಾ ಕೇಳಿ ಕಳವಳಪಡುವವನಾದನು ..." (9:7ಎ).

**ಹೆರೋದನು ಬಹಳ ಕಳವಳಗೊಂಡನು**

"ಕೆಲವರು ಎಲೀಯನು ಕಾಣಿಸಿಕೊಂಡನೆಂದು, ಕೆಲವರು, ಪೂರ್ವದ ಪ್ರವಾದಿ ಗಳಲ್ಲಿ ಒಬ್ಬನು ಎದ್ದಿದ್ದಾನೆ" ಎಂದರು (ಲೂಕ 9:8; ಮಾರ್ಕ 6:15).[27] ಅರಸನು ಏಕೆ

ಕಳವಳಗೊಂಡನು, ಜನರು - "ಯೋಹಾನನು ಎದ್ದು[28] ಬಂದಿದ್ದಾನೆ" ಎಂದು ಹೇಳಿದ ಸಂಗತಿಯನ್ನು ಕೇಳಿ ಈ ರೀತಿ ಹೆದರಿದನೇ, ಯಾಕೆ ಈ ಅದ್ಭುತಗಳು ನಡೆಯುತ್ತಿವೆ ಎಂದು ಸಹ ಬೇಸರಗೊಂಡಿರಬಹುದು[29] (ಮಾರ್ಕ 6:14ಬಿ; ನೋಡಿ ಲೂಕ 9:7ಬಿ). ಯಾಕಂದರೆ ಅವನು ಯೋಹಾನನ ತಲೆಯನ್ನು ಕತ್ತರಿಸಿದ್ದರಿಂದ ಕಳವಳಗೊಂಡು.[30]

ತನ್ನ ಹೆಂಡತಿಯನ್ನು ಮೆಚ್ಚಿಸಲು ಒಂದು ವರ್ಷದ ಹಿಂದೆ ಹೆರೋದನು ಪ್ರವಾದಿಯನ್ನು ಸೆರೆಮನೆಗೆ ಹಾಕಿದ್ದನು.[31] ಅರಸನು ತನ್ನ ಸಹೋದರನಾದ ಫಿಲಿಪ್ಪನ ಹೆಂಡತಿಯೊಡನೆ ಸಂಬಂಧಹೊಂದಿದ್ದ ವಿಷಯವನ್ನು ಪ್ರವಾದಿಯು ಖಂಡಿಸಿದನು (ಮತ್ತಾಯ 14:3). ಆಕೆಯು ಸಹ ಹೆರೋದನ ಸಂತಾನದವಳಾಗಿದ್ದು, ಆಕೆಯು ಅರಸನಿಗೆ, ಅಣ್ಣನ ಮಗಳಾಗಿದ್ದಳು.[32] ಅವಳು ಅಂತಿಪನೊಂದಿಗೆ ಮದುವೆಯಾಗಿದ್ದರಿಂದ, ಯಾಜಕಕಾಂಡದಲ್ಲಿರುವ ಅನೇಕ ಕಟ್ಟಳೆಗಳನ್ನು ಮೀರಿದ್ದಳು.[33] ಆದ್ದರಿಂದ ಯೋಹಾನನು ಧೈರ್ಯದಿಂದ - ಅರಸನಿಗೆ "ಆಕೆಯನ್ನು ಮದುವೆಯಾದದ್ದು ತಪ್ಪು ಎಂದು" ಖಂಡಿಸಿದ್ದನು (ವಚನ 4) - ಆದ್ದರಿಂದ ಹೆರೋದನು ಕೋಪಗೊಂಡಿದ್ದನು (ಮಾರ್ಕ 6:19).[34]

ಹೆರೋದ್ಯಳು ಯೋಹಾನನ್ನು ಸೆರೆಗೆ ಹಾಕಿ ಕೊಲ್ಲಬೇಕೆಂದಿರುವಾಗ (ಮಾರ್ಕ 6:19) ಜನರು ದಂಗೆ ಏಳುವರು ಎಂದು ತಿಳಿದು, ಅವನನ್ನು ಕೊಲ್ಲಲು ಹಿಂಜರಿದಿದ್ದನು (ನೋಡಿ ಮತ್ತಾಯ 14:5). ಯೋಹಾನನ ಮೇಲೆ ದ್ವೇಷವಿದ್ದರೂ, ಹೆರೋದನು ಯೋಹಾನನನ್ನು ಗೌರವಿಸಿದ್ದನು. ಹಾಗೂ ಯೋಹಾನನನ್ನು ನೀತಿವಂತನೆಂದೂ ದೇವಭಕ್ತನೆಂದು ತಿಳಿದು ಅವನನ್ನು ಕ್ಷೇಮವಾಗಿ ಇಟ್ಟಿದ್ದನು (ಮಾರ್ಕ 6:20ಎ). ನಂತರ ಮಾರ್ಕನು ವಿಚಿತ್ರವಾದ ಹೇಳಿಕೆಯನ್ನು ನೀಡಿ: "ಹೆರೋದನು ಬಹು ಗಲಿಬಿಲಿಗೊಂಡರೂ, ಅವನ ಮಾತನ್ನು ಸಂತೋಷದಿಂದ ಕೇಳುತ್ತಿದ್ದನು" (ವಚನ 20ಬಿ).[35] ರಾಜವಸ್ತ್ರಗಳನ್ನು ಧರಿಸಿದ್ಧ ಅರಸನ ಮುಂದೆ, ಯೋಹಾನನು ಒರಟಾದ ಬಟ್ಟೆಗಳನ್ನು ತೊಟ್ಟು ನಿಂತಿದ್ದನು. ಪ್ರವಾದಿಯ ತೋರು ಬೆರಳನ್ನು ಗಮನಿಸಿದಾಗ ಅರಸನಿಗೆ ಭಯವು ಇಮ್ಮಡಿಯಾಗುತ್ತಿತ್ತು. ಲಿವಿಂಗ್ ಬೈಬಲ್ ಪ್ರಕಾರ, ಯೋಹಾನನ ಬಳಿ ಅರಸನು ಮಾತನಾಡುವಾಗಲೆಲ್ಲಾ, ಅವನಿಗೆ ಭಯವಾದರೂ, ಅರಸನು ಅವನನ್ನು ಗೌರವಿಸಿದನು.

ಹೆರೋದನು ಯೋಹಾನನನ್ನು ಹೆರೋದ್ಯಳಿಂದ ತಪ್ಪಿಸಿ ಕಾಪಾಡುವ ಪ್ರಯತ್ನ ಮಾಡಿದ್ದಾಗ್ಯೂ - ತನ್ನ ಜನುಮದ ದಿನದಂದು ವಿಶೇಷ ಔತಣ ಕೂಟವನ್ನು ಏರ್ಪಡಿಸಲು ನಿರ್ಧರಿಸಿದನು (ಮತ್ತಾಯ 14:6; ಮಾರ್ಕ 6:21). ಉನ್ನತೋತ್ಸದಲ್ಲಿ[36] ಆ ಸಮಯದಲ್ಲಿ ಹೆರೋದ್ಯಳ ಮಗಳು ನೃತ್ಯ ಮಾಡಲು ಬಂದಳು (ಮತ್ತಾಯ 14:6; ಮಾರ್ಕ 6:22). ಆ ಹುಡುಗಿಯ ಹೆಸರು "ಸಲೋಮೆ" ಎಂದು ಯೋಸೇಫಸನು ತಿಳಿಸಿರುವನು. ಆಕೆಯು ಕಾರ್ಯಕ್ರಮದ ಬಗ್ಗೆ ನನ್ನ ಹೇಳಿಕೆಯು ಅವಮಾನಕರವಾಗದಿರಲಿ.[37] ಹೆರೋದ್ಯಳು ತನ್ನ ಮುಂದಿನ ಕೆಟ್ಟ ಚಟದ ಯೋಜನೆಯನ್ನು ಮುಂದುವರೆಸುವ ಸಲುವಾಗಿ[38] ಈ ಸಂದರ್ಭವನ್ನು ಕುಡಿಕರ ನಡುವೆ ತನ್ನ ಎರಡನೆಯ ಪತ್ನಿಯ ಮಗಳನ್ನು ಮನರಂಜನೆಗಾಗಿ ಬಳಸಿ, ತನ್ನ ಅಯೋಗ್ಯತವನ್ನು ಬಯಲು ಮಾಡಿದನು. ಇದರಿಂದ ಅವನ ಕುಟುಂಬದ ಗುಣವೇನೆಂದು ತೋರಿಸಿದನು.

ಆ ಸಲೋಮಿಯ ನಾಟ್ಯವಾಡಿ "ಹೆರೋದನನ್ನು ಹಾಗೂ ಪಂಕ್ತಿಯಲ್ಲಿ ಕೂತವರನ್ನು ಮೆಚ್ಚಿಸಿದಳು" (ಮಾರ್ಕ 6:22ಎ). ನಾಟ್ಯವನ್ನು ಅವರು ಏಕೆ "ಮೆಚ್ಚಿದರು" ಕಾರಣವು ತಿಳಿದು ಬರುತ್ತದೆ (ಕುಡಿದ ಅಮಲಿನಲ್ಲಿದ್ದವನು) ಅರಸನು "ಬೇಕಾದದ್ದನ್ನು ಬೇಡಿಕೋ ಕೊಡುತ್ತೇನೆ" ಅಂದನು (ಮಾರ್ಕ 6:22ಬಿ). "ನನ್ನ ರಾಜ್ಯದಲ್ಲಿ ಅರ್ಧವನ್ನು ಬೇಕಾದರು ಕೊಡುತ್ತೇನೆ ಎಂದು ಆಣೆ ಮಾಡಿದನು"[39] (ಮಾರ್ಕ 6:23; ನೋಡಿ ಮತ್ತಾಯ 14:7).

ಎಂಥಾ ಒಂದು ಕೊಡುಗೆ! ಐಶ್ವರ್ಯವುಳ್ಳ ರಾಜ್ಯದಲ್ಲಿ ನೀನು ಅರ್ಧವನ್ನು ಪಡೆಯುವದಾದರೆ?[40] ಎಂಥಾ ಅನುಭವವದು. ಸಲೋಮೆಯು ಹಿಂಜರಿಯಲಿಲ್ಲ. ತನ್ನ

ತಾಯಿಯಿಂದ ಪ್ರೇರಿತಳಾಗಿ, ಯೋಹಾನನ ತಲೆಯನ್ನು "ಒಂದು ತಟ್ಟೆಯಲ್ಲಿ ತರಬೇಕೆಂದು" ಬೇಡಿಕೊಂಡಳು (ಮತ್ತಾಯ 14:8).[41] ಹೆರೋದ್ಯಳಿಗೆ ಮರಣದ ಮಾಹಿತಿ ಅಗತ್ಯವಿರಲಿಲ್ಲ, ಯಾಕೆಂದರೆ ಅದು ಮೋಸವಾಗಬಹುದಿತ್ತು.[42] ಆತನ ದೇಹವನ್ನು ಸಹ ನೋಡಲು ಆಕೆ ಬಯಸಲಿಲ್ಲ; ಏಕೆಂದರೆ ಅಲ್ಲಿ ಮರಣದ ಪರಿಸರ ಉಂಟಾಗುತ್ತಿತ್ತು. ಅವನ ಕತ್ತರಿಸಿದ ತಲೆಯಿಂದ ಸೋರುತ್ತಿದ ರಕ್ತವನ್ನು ನೋಡಿದಾಗ ಮಾತ್ರ ಆಕೆ ತೃಪ್ತಳಾಗುತ್ತಿದ್ದಳು. "ಆ ಕ್ಷಣದಲ್ಲೆ" ಯೋಹಾನನ ತಲೆಯನ್ನು ಬಯಸಿದಳು (ಮಾರ್ಕ 6:25) - ಹೆರೋದನ ಯೋಚನೆ ಬದಲಾಗುವದರೊಳಗಾಗಿ ಅದನ್ನು ಬಯಸಿದಳು.

ಅರಸನು ಬೇಸರಗೊಂಡರು; ಮರ್ಯಾದೆಯ ನಿಮಿತ್ತವಾಗಿ, ಯೋಹಾನನ ತಲೆಯನ್ನು ಕತ್ತರಿಸಿ ತರಬೇಕೆಂದು ಅಪ್ಪಣೆ ಮಾಡಿದನು:

> ನೀನು ಹೋಗಿ ಯೋಹಾನನ ತಲೆಯನ್ನು ತಂದುಕೊಡು ಎಂದು ಅಪ್ಪಣೆಕೊಟ್ಟು ಕಳುಹಿಸಿದನು; ಅವನು ಹೋಗಿ ಸೆರೆಮನೆಯಲ್ಲಿ ಅವನ ತಲೆಯನ್ನು ಹೊಯಿದು ಪರಾತಿನಲ್ಲಿ ತಂದು ಆ ಹುಡುಗಿಗೆ ಕೊಟ್ಟನು. ಆ ಹುಡುಗಿ ಅದನ್ನು ತನ್ನ ತಾಯಿಗೆ ಕೊಟ್ಟಳು (ಮಾರ್ಕ 6:27, 28).

ಈ ಘಟನೆಯಿಂದ ಹೆರೋದ್ಯಳಿಗೆ ಆನಂದವಾದರೂ, ಹೆರೋದನಿಗೆ ಅಸಮಧಾನವು ಉಂಟಾಯಿತು. "ಈ ಮಾತಿಗೆ ಅರಸನು ದುಃಖಪಟ್ಟನು" (ಮತ್ತಾಯ 14:9). ಹೌದು ಅವನು ಮನಸ್ಸಾಕ್ಷಿ ಹೊಂದಿದ್ದನು. ಆದರೆ ಬಹುಗೊಂದಲಕ್ಕೆ ತುತ್ತಾಗಿದ್ದನು. ಆದ್ದರಿಂದ ಅವನು ಜನರ ಬಾಯಲ್ಲಿ ಕೇಳುತ್ತಿದ್ದ ಮೂಢನಂಬಿಕೆಯ ಮಾತುಗಳ ನಿಮಿತ್ತವಾಗಿ, ಅವನು ಸಂಶಯವಳ್ಳವನಾದನು. ಮಾರ್ಕನ ಪ್ರಕಾರ ಹೆರೋದನು ಆತನ ಸುದ್ದಿಯನ್ನು ಕೇಳಿ - "ನಾನು ತಲೆ ಹೋಯಿಸಿದ ಯೋಹಾನನೇ ತಿರಿಗಿ ಬದುಕಿ ಬಂದಿದ್ದಾನೆ ಅಂದನು" (ಮಾರ್ಕ 6:16; ನೋಡಿ ಮತ್ತಾಯ 14:2).

**ಹೆರೋದನ ಆಸಕ್ತಿ ಅಪಾಯವುಳ್ಳದ್ದಾಗಿತ್ತು**

ತಾನು ಕೇಳುತ್ತಿದ್ದ ಸಂಗತಿಗಳಿಗೆ ಮೂಲವಾದ ವ್ಯಕ್ತಿಯು, ಯೋಹಾನನಾಗಿರಬಹುದೇ ಎಂದು ನೋಡಲು ಹೆರೋದನು ಕಾತುರನಾದನು (ಲೂಕ 9:9ಎ). ಲೂಕನು ಹೇಳುವಂತೆ, "ಅವನನ್ನು ನೋಡಬೇಕೆಂದು ಪ್ರಯತ್ನಿಸಿದನು (ಲೂಕ 9:9ಬಿ). ಈ ಮಾತಗಳನ್ನು ಓದುವಾಗ, ಗಲಿಲಾಯದ ಸೇವೆಗೆ ಹೆರೋದನಿಂದ ತೊಡಕಾಗಬಹುದಾದ ವಿಚಾರವನ್ನು ಗಮನಿಸಿರಿ. ಸೇವೆ ಮಾಡುತ್ತಿದ್ದ ಸಾಧಾರಣವಾದ ವ್ಯಕ್ತಿಯಾದ ಯೇಸುವನ್ನು ಹುಡುಕಲು ಅರಸನಿಗೆ ಹೆಚ್ಚು ಶ್ರಮವಾಗಲಿಲ್ಲ.

ಆಸಕ್ತಿಯಿಲ್ಲದ - ಅರ್ಹವಲ್ಲದ ಈ ಪ್ರಶ್ನೆಯಿಂದ ಯೇಸುವಿಗೆ ಅಪಾಯ ಉಂಟಾಯಿತು. ನೀವುಗಳು ದನ ಮೇಯುವ ಕಾವಲನ್ನು ಹಾದುಹೋಗುವಾಗ, ಅಲ್ಲಿರುವ ಎತ್ತು ನಿಮ್ಮ ಗಮನ ಸೆಳೆಯಬಾರದೆಂದು ಬಯಸುತ್ತೀರಿ. ಕಣಜದ ಗೂಡಿನ ಬಳಿಹಾದುಹೋಗುವಾಗ, ಅವುಗಳು ನಿಮ್ಮ ಕಡೆಗೆ ಬಾರದಂತೆ ಎಚ್ಚರ ವಹಿಸುವಿರಲ್ಲವೇ. ನನ್ನ ಸ್ಥಳದಲ್ಲಿ ಇವುಗಳು ಇರುವದಾದರೆ, ಅವುಗಳು ನನ್ನ ಕಡೆಗೆ ನೋಡದಂತೆ, ನಾನು ಎಚ್ಚರವಾಗಿರುತ್ತೇನೆ.

ಮುಂದೆ ನಾವು ನೋಡುವಂತೆ, ಹೆರೋದನಲ್ಲಿದ್ದ ಯೇಸುವನ್ನು ನೋಡಬೇಕೆಂಬ ಬಯಕೆಯು ವ್ಯರ್ಥವಾಗಲಿಲ್ಲ. ಯೇಸುವಿನ ಸೇವೆಯ ಕಡೇ ವಾರದಲ್ಲಿ: "ಹೆರೋದನು ಯೇಸುವನ್ನು ನೋಡಿದಾಗ ಬಹಳ ಸಂತೋಷಪಟ್ಟನು; ಯಾಕಂದರೆ ಆತನ ವಿಷಯವಾಗಿ ಅನೇಕ ಸಂಗತಿಗಳನ್ನು ಕೇಳಿದ್ದರಿಂದ ಆತನನ್ನು ಕಾಣಬೇಕೆಂದು ಬಹುಕಾಲದಿಂದ ಅಪೇಕ್ಷಿಸಿದ್ದನು. ಆತನಿಂದ ಯಾವದಾದರೂ ಒಂದು ಸೂಚಕ ಕಾರ್ಯವಾಗುವದನ್ನು ನೋಡಬೇಕೆಂದು ನಿರೀಕ್ಷಿಸಿದನು" (ಲೂಕ 23:8). ಯೇಸುವನ್ನು ವಿಚಾರಿಸಿದ ನಂತರ,

ಯೇಸುವಿನಿಂದ ಗೊಂದಲ ಉಂಟಾಗಬಹುದು ಎಂದು ತಿಳಿದು, ಆತನನ್ನು ಕೊಲ್ಲಲು ಅಪ್ಪಣೆ ನೀಡಿರಬಹುದು (ನೋಡಿ ಲೂಕ 13:31-33).[43] ಹೌದು ಅರಸನು ಯೇಸುವಿನ ಸೇವೆಯಲ್ಲಿ ಆಸಕ್ತಿ ತೋರಿದ ಸಂಗತಿಯಿಂದ ಅವನಿಗೆ ಅಪಾಯವು ಎದುರಾಯಿತು.

## ಹಿಂದಿರುಗಿದ ಒಂದು ವಿಧಾನ (ಮತ್ತಾಯ 14:12ಬಿ, 13; ಮಾರ್ಕ 6:30-32; ಲೂಕ 9:10; ಯೋಹಾನ 6:1)

**ಅವಶ್ಯವಿದ್ದ ಒಂದು ವರದಿ**

ಇವೆಲ್ಲವುಗಳ ನಡುವೆ ಯೇಸು ತನ್ನ ಸೇವೆಯನ್ನು ಮುಗಿಸಿ, ತಾನು ಮತ್ತು ಆತನ ಶಿಷ್ಯ ರೆಲ್ಲರೂ ಪುನಃ ಒಟ್ಟಾಗಿ ಸೇರಿಕೊಂಡರು.[44] "ಇತ್ತಲಾಗಿ ಅಪೊಸ್ತಲರು ಹಿಂದಿರುಗಿ ಬಂದು ತಾವು ಮಾಡಿದ್ದನ್ನೆಲ್ಲಾ ಯೇಸುವಿಗೆ ವಿವರವಾಗಿ ಹೇಳಿದರು" (ಲೂಕ 9:10ಎ; ಮಾರ್ಕ 6:30; ನೋಡಿ ಮತ್ತಾಯ 14:12ಬಿ). ಅವರು ವಿವರಣೆಯು ಬಹು ಅಗತ್ಯವಾಗಿತ್ತು. ಅವು ಹೇಗೆ? "ಯಾವ ರೀತಿಯಲ್ಲಿ ಮಾಡಿದರು?" ಎಂಬ ವರದಿಯು ಅದಾಗಿತ್ತು. ಅವರು ಮಾಡಿರಬಹುದಾದ ತಪ್ಪುಗಳ ಕುರಿತು ಅನೇಕ ಪ್ರಶ್ನೆಗಳನ್ನು ಕೇಳಿರಬಹುದು.

ಯೇಸು ಈ ವಿಷಯದಲ್ಲಿ ತನ್ನ ಶಿಷ್ಯರಿಗೆ ಸಹಾಯ ಮಾಡಲು ಯತ್ನಿಸುವಾಗ, ಅಲ್ಲಿ ಅನೇಕರು ಗುಂಪುಕೂಡಿ ಬಂದರು. "ಯಾಕೆಂದರೆ ಬಹಳ ಮಂದಿ ಬರುತ್ತಾ ಹೋಗುತ್ತಾ ಇದ್ದರು" (ಮಾರ್ಕ 6:31ಬಿ)[45] - ಅವರ ಮೊದಲ ಪ್ರಯಾಣದಿಂದ, ಅಲ್ಪ ವಿರಾಮವಷ್ಟೆ ಹೊಂದಿದ್ದರು.

**ಬೇಸರದ ಒಂದು ವರದಿ**

ಯೋಹಾನನ ಶಿಷ್ಯರು ಈ ಸಂಗತಿಗಳನ್ನು ಕೇಳಿದಾಗ ಅವರು ಬಂದು ಅವನ ಶವವನ್ನು ಹೊತ್ತುಕೊಂಡು ಹೋಗಿ ಸಮಾಧಿಯಲ್ಲಿಟ್ಟರು (ಮಾರ್ಕ 6:29; ನೋಡಿ ಮತ್ತಾಯ 14:12ಎ). ಯೇಸುವಿನ ಅಪೊಸ್ತಲರು ಬಂದ ಸಮಯದಲ್ಲಿ ಯೋಹಾನನ ಶಿಷ್ಯರು ಬಂದು, ಯೋಹಾನನ ಸಂಗತಿಯನ್ನು ಯೇಸುವಿಗೆ ತಿಳಿಸಿದರು (ಮತ್ತಾಯ 14:12ಬಿ).

**ಏಕಾಂತತೆಯಲ್ಲಿ ಒಂದು ವಿಶ್ರಾಂತಿ**

"ಯೋಹಾನನ ವಿಚಾರವನ್ನು ಯೇಸು ಕೇಳಿ" (ಮತ್ತಾಯ 14:13ಎ), "ಶಿಷ್ಯರಿಗೆ[46] ವಿಂಗಡವಾಗಿ ಅಡವಿಗೆ ಹೋಗೋಣ" ಅಂದನು (ಮಾರ್ಕ 6:31). ಇದರಲ್ಲಿ ಎರಡು ಉದ್ದೇಶ ಗಳಿದ್ದವು. ಮೊದಲನೆಯದಾಗಿ, ಯೇಸು ಮತ್ತು ಆತನ ಶಿಷ್ಯರು ಹೆರೋದನ ಪ್ರಾಂತದಿಂದ ಹೊರಹೋಗುವದು. ಈ ಸಂದರ್ಭದಿಂದ ಯೇಸು ಗಲಿಲಾಯದಲ್ಲಿ ಹೆಚ್ಚು ಸಮಯವನ್ನು ಕಳೆಯಲಿಲ್ಲ. ಆಗಾಗ್ಗೆ, ಆತನು ಅಲ್ಲಿಗೆ ಬರುತ್ತಿದ್ದರೂ, ಆತನ ಪ್ರಮುಖ ಕಾರ್ಯಗಳು ಅಲ್ಲಿ ಅಂತ್ಯಗೊಂಡಿದ್ದವು.

ಎರಡನೆಯದಾಗಿ, ಯೇಸು ಶಿಷ್ಯರೊಂದಿಗೆ ಏಕಾಂತದಲ್ಲಿ ಸಮಯ ಕಳೆಯಬೇಕಿತ್ತು.[47] ಅವರು ಸೇವೆಯಲ್ಲಿ ಶ್ರಮಪಟ್ಟು ಹಿಂದಿರುಗಿದಾಗ ಅವರಿಗೆ ವಿಶ್ರಾಂತಿಯ ಅಗತ್ಯವಿತ್ತು (ಮಾರ್ಕ 6:31ಎ). ಮತ್ತಾಯ ಮತ್ತು ಮಾರ್ಕ ಹೇಳಿದರು. ಅಲ್ಲಿ ಯೇಸು, ಅವರ ಸೇವೆಯ ಪ್ರಥಮ ಪ್ರಯಾಣದಲ್ಲಿ ಆದ ಸಂಗತಿಗಳನ್ನು ಚರ್ಚಿಸಬೇಕಿತು.

ಈಗ ಇನ್ನೊಂದು ಸಾರಿ ಅವರೆಲ್ಲರ, ಗಲಿಲಾಯದ ಪೂರ್ವಕ್ಕೆ ಪ್ರಯಾಣ ಮಾಡಿದರು,[48] "ಅವರು ವಿಂಗಡವಾಗಿ ಅಡವಿಗೆ ಹೋದರು" (ಮತ್ತಾಯ 14:13ಎ; ಮಾರ್ಕ 6:31ಎ). ಅವರು "ಬೆತ್ಸಾಯಿದಕ್ಕೆ" ಹೋದರು ಎಂದು ಲೂಕನು ಹೇಳಿರುವನು (ಲೂಕ 9:10). ಸಮುದ್ರದ ತೀರದಲ್ಲಿ ಬೆತ್ಸಾಯಿದ ಎಂಬ ಎರಡು ಪಟ್ಟಣಗಳಿದ್ದವು.[49] ಕಪೆರ್ನೌಮಿನ

ಪರಿಚಯ ಈಗಾಗಲೇ ನೀಡಿದ್ದೇನೆ (ಮಾರ್ಕ 6:45).[50] ಈಗ ಅವರು ಗಲಿಲಾಯ ಸಮುದ್ರದ ಉತ್ತರದ ಒಂದು ಹಳ್ಳಿಗೆ ಪ್ರಯಾಣಿಸಿದರು. "ಜೂಲಿಯಸ್ ಬೆತ್ಸಾಯಿದ ಎಂಬುದು ಅದರ ಪೂರ್ಣ ಹೆಸರು."[51] ಆದರೆ ಅಂತಿಮವಾಗಿ ಅವರು ವಿಂಗಡವಾಗಿ ಏಕಾಂತತೆ ಇರುವ ಸ್ಥಳಕ್ಕೆ ಪ್ರಯಾಣಿಸುತ್ತಿದ್ದರು.

## ಮುಕ್ತಾಯ

ವಾಕ್ಯಭಾಗವನ್ನು ಮುಂದುವರೆಸಲಾಗುವದು. ಅಲ್ಲಿ ಜನರು ಆತನಿಗಾಗಿ ಕಾಯ್ದಿದ್ದರು. ಈ ಭಾಗವನ್ನು ಅಂತ್ಯಗೊಳಿಸುವಾಗ, ಐದು ಅಂಶಗಳನ್ನು ತಿಳಿಸಲು ಇಚ್ಚಿಸುತ್ತೇನೆ.

(1) "ಬೆಳೆಯು ಬಹಳ" ಕೆಲಸಗಾರರು ಸ್ವಲ್ಪವೇ (ಮತ್ತಾಯ 9:37). ಇದಕ್ಕೆ ನಾವುಗಳು ಪ್ರತಿಕ್ರಯಿಸೋಣ.

(2) ಆತನು "ಬೆಳೆಯ ಯಜಮಾನ" ನಾಗಿರುವದು ಸತ್ಯವಾಗಿದೆ (ಮತ್ತಾಯ 9:38). "ವೃದ್ಧಿಪಡಿಸುವವನು" ಆತನೇ (1 ಕೊರಿಂಥ 3:6; KJV), ದೇವರು ಆಶೀರ್ವದಿಸುತ್ತಾನೆ.

(3) ನಾವು "ಪುಕ್ಕಟೆಯಾಗಿ ಪಡೆದಂತೆ" "ಪುಕ್ಕಟೆಯಾಗಿ ಕೊಡೋಣ" (ಮತ್ತಾಯ 10:8). ದೇವರ ಚಿಂತನೆಗಾಗಿ, ನಾವು ಸಹ ಉದಾರವಾಗಿರೋಣ.

(4) ಆತ್ಮೀಕ ಯಶಸ್ಸು ಅಪಾಯವನ್ನು ತರುವದಾದರೂ, "ಅವು ಅಂಧಕಾರದ ಶಕ್ತಿಯಿಂದ" ಬರುತ್ತದೆ (ಎಫೆಸ 6:12). ನಮ್ಮ ದೇವರು ನಮ್ಮನ್ನು ಕಾಪಾಡುತ್ತಿರುವದರಿಂದ ಧೈರ್ಯವಾಗಿರೋಣ.

(5) ಹಿಂಸೆಯ ಸಂದರ್ಭದಲ್ಲಿ, ತಪ್ಪಿಸಿಕೊಳ್ಳುವ ಮಾರ್ಗವನ್ನು ಯೇಸು ನೀಡುವನು (1 ಕೊರಿಂಥ 10:13) - ಗಲಿಲಾಯದ ಆಚೆ ಇರುವದಾದರೂ ನಂಬಿಗಸ್ತರಾಗೋಣ. ಆತನು ದಯಪಾಲಿಸುವ ದೇವರು.

ನಮ್ಮ ಅಧ್ಯಯನಗಳು ಯೇಸುವಿನ ಬಳಿಗೆ ನಮ್ಮನ್ನು ಸೆಳೆಯಲಿ. ನಂಬಿಕೆಯಲ್ಲಿ ಬಲಪಡಿಸಲಿ.

---

## ಮಾಹಿತಿ

ಈ ಪಾಠಕ್ಕೆ ಸಂಬಂಧಪಟ್ಟಂತೆ, ನನ್ನ ಸಹಜ ಕ್ರಮವನ್ನೆ ಬದಲಾಯಿಸುತ್ತೇನೆ. ಒಂದು ಪ್ರಸಂಗದ ಬದಲು ಎರಡನ್ನು ಸೇರಿಸುತ್ತೇನೆ. ಮತ್ತಾಯ 10ರಲ್ಲಿ ಯೇಸು ಅಪೊಸ್ತಲರಿಗೆ ತಿಳಿಸಿದ ಸಲಹೆ ಮತ್ತಾಯ 14ರಲ್ಲಿನ ಯೋಹಾನ ಮರಣ ಎರಡನೆಯ ಸಂಗತಿ. ಇದು ಯೋಹಾನನ ಚರಿತ್ರೆಯ ಸಾರಂಶ.

ಮತ್ತಾಯ 10ರ ವಿಚಾರವನ್ನು, "ಕಳೆದು ಹೋದ ಕುರಿ" (ಯೆಹೂದ್ಯರ) ಕಡೆಗೆ ಹೋಲಿಸಿ "ಸತ್ಯದಿಂದ ದೂರಹೋದವರಿಗೆ" ಇದರಿಂದ ಸಲಹೆಗಳನ್ನು ನೀಡಿರಿ (ನಂಬಿಕೆಯಿಲ್ಲದ ಕ್ರೈಸ್ತರ ಬಗ್ಗೆ ಯಾಕೋಬ 5:19, 20; ಗಲಾತ್ಯ 6:1 ನೋಡಿ). ಮಹಾ ಆ ದೇಶವನ್ನು ಪಾಲಿಸುವ ಮೊದಲು "ಮಿತಿಯೊಳಗಿರುವ ಆದೇಶವನ್ನು ಪಾಲಿಸಿರಿ" (ಬಿದ್ದು ಹೋದ ಕ್ರೈಸ್ತರನ್ನು ಮೇಲೆತ್ತಲು ಪ್ರಯತ್ನಿಸಿ) (ಅನ್ಯರಿಗೆ ಸುವಾರ್ತೆಯನ್ನು ಸಾರುವ ವಿಷಯದಲ್ಲಿ).

ಯೋಹಾನನ ಮರಣ ಹಾಗೂ ಅದರ ಸುತ್ತಲು ನಡೆದ ವಿಚಾರವನ್ನು ಅಧ್ಯಯನ ಮಾಡಿರಿ.

ಟಿಪ್ಪಣಿಗಳು

[1]ಮತ್ತಾಯ 10:2-4ನ್ನು ಹೆಚ್ಚು ಅಧ್ಯಯನ ಮಾಡಲು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪಾಠವನ್ನು ನೋಡಿ. [2]ಸಂಗೀತದ ಕುರಿತು ಕೆಲವರು "ಅಂತಿಮ ಪ್ರಯಾಣ" ಅಂದರೆ ಅದು ಅವರ ಕೊನೆಯ ಪ್ರಯಾಣವೇ. ಜನರನ್ನು ತಮ್ಮ ಕಡೆಗೆ ಬರುವಂತೆ ಮಾಡಲು ಬಳಸಿದ ಬಹಿರಂಗ ಪ್ರಕಟನೆ ಯಾಗಿರಬಹುದು. [3]ಹೆರೋದನ ಮಾಹಿತಿಗಾಗಿ, "ಯೇಸು ಬಂದಂಥ ಕಾಲದ" ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪಾಠವನ್ನು ನೋಡಿ. [4]"ಸ್ತ್ರೀ ಹಾಗೂ ಮಕ್ಕಳನ್ನು ಹರತು ಪಡಿಸಿ ಐದು ಸಾವಿರ ಗಂಡಸರಿದ್ದರು" (ಮತ್ತಾಯ 14:21). [5]"ಕುರುಬನಿಲ್ಲದ ಕುರಿ" ಅಂದರೆ ಆತ್ಮೀಕ ಕೊರತೆ ನಾಯಕನಿಲ್ಲದ, ಮಾರ್ಗದರ್ಶವಿಲ್ಲದ ಎಂಬ ಅರ್ಥ. [6]ಆತನು ವೃದ್ಧಿಯನ್ನು ಕೊಡುವದರಿಂದ "ಆತನೇ ಬೆಳೆಯ ಯಜಮಾನನು" (1 ಕೊರಿಂಥ 3:6, 7). [7]*ಕ್ರಿಸ್ತನ ಜೀವನ ಚರಿತ್ರೆ, 2ನೇ* "ಕಾರ್ಯನಿರತ ದಿನದ" ಪಾಠವನ್ನು ನೋಡಿರಿ. [8]*ಕ್ರಿಸ್ತನ ಜೀವನ ಚರಿತ್ರೆ, 2ನೇ* "ಕಾರ್ಯನಿರತ ದಿನದ" ಪಾಠವನ್ನು ನೋಡಿರಿ. [9]"ಅವರು ತಮ್ಮ ರೆಕ್ಕೆಗಳಿಂದ ಪ್ರಯತ್ನಿಸಲು" ಎಂಬ ನಮ್ಮ ದೇಶದ ಒಂದು ಹೇಳಿಕೆ. ಪಕ್ಷಿಗಳ ಪರಿಚಯವಿರುವವರು ಇದನ್ನು ಗ್ರಹಿಸಬಹುದು. [10]ಹುಟ್ಟಿದ ಊರು.

[11]ಯೇಸು "ಎಪ್ಪತ್ತು ಜನರನ್ನು" ಕಳುಹಿಸುವಾಗ ನೀಡಿದ ಸಲಹೆಗಳನ್ನು ಧ್ಯಾನ ಮಾಡಬಹುದು. [12]ಮತ್ತಾಯ 10ನ್ನು "ಮಿತಿಗೊಳಿಸಿದ ಆ ದೇಶ"; ಮತ್ತಾಯ 28:18-20 "ಮಹಾ ಆದೇಶ." [13]ಪ್ರಸಂದ ಮೂಲಕ, ಯೇಸುವನ್ನು ಪ್ರಚಾರಪಡಿಸಿದರು (ನೋಡಿ ಮತ್ತಾಯ 14:1; ಮಾರ್ಕ 6:13, 14). [14]ಮರಣದಿಂದ ಎಬ್ಬಿಸುವ ಶಕ್ತಿಯನ್ನು "ಮಹತ್ಕಾರ್ಯಗಳನ್ನು" ಮಾಡುವ ಶಕ್ತಿಯೊಂದಿಗೆ ಹೋಲಿಸಲಾಗಿದೆ. ಮಹತ್ಕಾರ್ಯಗಳನ್ನು ಮಾಡುವವರು ಸತ್ತವರನ್ನು ಸಹ ಎಬ್ಬಿಸಬೇಕು. [15]ಮೂರು ಸುವಾರ್ತೆಗಳಲ್ಲಿರುವ ಲೆಕ್ಕಾಚಾರ ಸಲಹೆಗಳನ್ನು ಹೋಲಿಸಿ. ಅಗತ್ಯವಿರುವ ಉಡುಪಿನ ಬಗ್ಗೆ ಕ್ರಿಸ್ತನು ತಿಳಿಸಿದನು, ಆಹಾರವನ್ನು ಕೊಂಡೊಯ್ಯಬಾರದಿತ್ತು, ಕೆಲವೇ ದಿವಸಗಳ ಪ್ರಯಾಣವಾದ್ದರಿಂದ ಹೆಚ್ಚು ಹಣದ ಅಗತ್ಯವಿರಲಿಲ್ಲ. ಅತಿಥಿ ಸತ್ಕಾರ ನೀಡುತ್ತಿದ್ದ ಮನೆಗಳಿಗೆ ಹೋಗುತ್ತಿದ್ದರು. ಸಕಲ ಪ್ರಯಾಣಕ್ಕೂ ಇದು ಅನ್ವಹಿಸುವದಿಲ್ಲ (ಗಮನಿಸಿ ಲೂಕ 22:35, 36). [16]"ಮಿತಿಯುಳ್ಳ ಆದೇಶ" ಎಂಬ ಹೆಚ್ಚಿನ ಬರವಣಿಗೆಯಲ್ಲಿ ನೋಡಿರಿ. [17]ನಂಬಿಕೆಯ ಕುರಿತ ಅರಿಕೆಗೆ ಸಂಬಂಧ ಪಟ್ಟದ್ದು, ದೀಕ್ಷಾಸ್ನಾನದ ಮೊದಲು ಮಾಡುವದು. ಒಂದು ಸಾರಿ ಮಾಡುವದರಲ್ಲಿ ಅದು ಅಂತ್ಯಗೊಳ್ಳುವದಿಲ್ಲ. [18]"ದೆವ್ವಗಳ ಮೇಲೆ ಅಧಿಕಾರ ನೀಡಿದನು" ಎಂದು ಲೂಕನು ಹೇಳಿರುವನು (ಲೂಕ 9:1). [19]ಈ ವಚನಕ್ಕೆ ಅಪೊಸ್ತಲರ ಕೃತ್ಯಗಳು ಅಧ್ಯಯನ ಸಹಾಯಕ. [20]ಟಿಪ್ಪಣಿ 11ನ್ನು ನೋಡಿರಿ.

[21]ಮಾರ್ಕ 16:15, 16; ಲೂಕ 24:46, 47 "ಮಹಾ ಆದೇಶ" ನೀಡಲಾಗಿದೆ. [22]ಅಮೇರಿಕದಲ್ಲಿರುವವರು "ತಕ್ಷಣ ಮಾಡಿರಿ" ಎಂಬ ವ್ಯಾಖ್ಯಾನ ಅರಿತಿದ್ದಾರೆ. [23]ಪೌಲನು ಕೊರಿಂಥದಲ್ಲಿರುವಾಗ, ಇತರೆ ಸಭೆಗಳಿಂದ ಸಹಾಯ ಪಡೆದನು (ಫಿಲಿಪ್ಪ 4:15). [24]ಈ ಪುಸ್ತಕದ ಮುಂದಿನ ಭಾಗದಲ್ಲಿ ದಾಖಲಾಗಿರುವ "ರಾಜ ಮತ್ತು ಅವನ ರಾಯಭಾರಿ" ಪ್ರಸಂಗ ನೋಡಿರಿ ಅದರಲ್ಲಿ ಮತ್ತಾಯ 10ರ ಸಲಹೆಗಳನ್ನು ನೋಡಿರಿ. [25]ಇಂಥಹ ಪ್ರಯಾಣಕ್ಕೆ ಕಳುಹಿಸಲ್ಪಟ್ಟವರ ಆನಂದವನ್ನು ಗಮನಿಸಿರಿ (ಲೂಕ 10:17). [26]ಹೆರೋದನ ಕುರಿತು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕವನ್ನು ನೋಡಿರಿ. [27]ಮತ್ತಾಯ 16:13, 14 ರೊಂದಿಗೆ ಹೋಲಿಸಿ. ಯೆಹೂದ್ಯರು ಕ್ರಿಸ್ತನನ್ನು ಮೆಸ್ಸಿಯನೆಂದು ಅರಿಕೆ ಮಾಡಲಿಲ್ಲ. ಯಾಕಂದರೆ ಮೆಸ್ಸೀಯನು ಲೌಕಿಕ ರಾಜ ಎಂದು ತಿಳಿದಿದ್ದರು. ಆತನು ಮತ್ತೊಬ್ಬ ಪ್ರವಾದಿ ಎಂದು ತಿಳಿದಿದ್ದರು. ಕಾಲಾಂತರದಲ್ಲಿಯೂ ಜನರು ಯೇಸುವಿನ ಕುರಿತು ಇದೇ ಅಭಿಪ್ರಾಯ ಹೊಂದಿರುವರು. [28]ಯೇಸು ಮತ್ತು ಯೋಹಾನರಿಬ್ಬರು ಒಂದೇ ಕಾಲದ ಸೇವೆಯನ್ನು ಹೊಂದಿದರು ಎಂದು ಆ ಜನರು ಅರಿಯಲಿಲ್ಲ. [29]ಯೋಹಾನನು ತನ್ನ ಸೇವಾಕಾಲದಲ್ಲಿ "ಮಹತ್ಕಾರ್ಯಗಳನ್ನು ಮಾಡಲಿಲ್ಲ" (ಯೋಹಾನ 10:41). ಆದರೆ ಒಬ್ಬನು ಮರಣದಿಂದ ಬಿದ್ದು ಬಂದಿದ್ದರೆ, ಅವನು ದೈವೀಕ ಶಕ್ತಿಯನ್ನು ಪಡೆದಿದ್ದರು ಎಂಬುದು ಕೆಲವರ ಅಭಿಪ್ರಾಯವಾಗಿತ್ತು. [30]ಮತ್ತಾಯ 14:13ರಲ್ಲಿ ಯೇಸು ಯೋಹಾನನ ಮರಣದ ಸುದ್ದಿಯನ್ನು ಕೇಳಿದಾಗ, ಆತನು ಗಲಿಲಾಯ ಸಮುದ್ರವನ್ನು ದಾಟಿಹೋದನು (ಐದು ಸಾವಿರ ಜನರಿಗೆ ಊಟ ನೀಡಿದನು) ಮಾಕವ 6:30-32ರಲ್ಲಿ, ಶಿಷ್ಯರ ಗಲಿಲಾಯ ಪ್ರಯಾಣ ಮುಗಿಸಿ ಹಿಂದಿರುಗಿದ ತಕ್ಷಣ, ಅವರು ಸಮುದ್ರದ ಆಚೆದಡಕ್ಕೆ ಹೋದರು. ಅವರ ಗಲಿಲಾಯದ ಮೂರನೇ ಪ್ರವಾಸದಿಂದ ಹಿಂದಿರುಗಿದಾಗ ಯೋಹಾನನ ಮರಣದ ವಾರ್ತೆಯನ್ನು ಕೇಳಿದರು.

[31]"ಆತನ ಮಹಿಮೆಯನ್ನು ನೋಡಿದೆವು" ಎಂಬ *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕವನ್ನು ನೋಡಿರಿ. [32]ಹೆರೋದ (ಅಂತಿಪನ) ಹಾೂ ಫಿಲಿಪ (ಹೆರೋದ ಫಿಲಿಪ್ಪಿ) ಹಾಗೂ ಹೆರೋದ್ಯಳ ಕುರಿತು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕವನ್ನು ನೋಡಿ. [33]ಹತ್ತಿರ ಸಂಬಂಧದ ಮದುವೆಯನ್ನು ಧರ್ಮಶಾಸ್ತ್ರವು ಖಂಡಿಸುತ್ತದೆ (ಯಾಜಕಕಾಂಡ 18:1-18; 20:11:21). ತನ್ನ ಸಹೋದರನ ಮಗಳನ್ನು ಮದುವೆಯಾಗಬಾರದು (ಯಾಜಕಕಾಂಡ 18:16; ಧರ್ಮೋಪದೇಶಕಾಂಡ 25:5-10).

[34]ಯೋಹಾನನು ಚಿತ್ರಿಸಿದ ಸುವಾರ್ತ ವಿಧಾನವನ್ನು ಅರಿಯೆವು. [35]ಫೆಲಿಕ್ಸನು ಪೌಲನ ಮಾತುಗಳನ್ನು ಆಲಿಸಿದ ಅಪೊಸ್ತಲರ ಕೃತ್ಯಗಳು 24:24-26ನ್ನು ಹೋಲಿಸಿರಿ. [36]ಅನ್ಯರ ಚೌತಣದ ಸುದ್ದಿ, ಹೆರೋದನ ನೈತಿಕ ಮಟ್ಟ, ಅದರ ಉದ್ದೇಶವನ್ನು ತಿಳಿಸಿತ್ತು. [37]ಲೌಕಿಕ ಮನರಂಜನೆಯ ಕುರಿತು ನಮಗೆ ತಿಳಿದದೆ. ಸೊಲೋಮೆಯ "ಏಳು ಹೊದಿಕೆಗಳ ನಾಟ್ಯವಾಡಿದಳು." [38]ಮಾರ್ಕ 6:21ರಲ್ಲಿ ಯೋಜಿತ ದಿವಸ ಬಂದಿತು, ಹೆರೋದ್ಯಳ ಯೋಜನೆ, ಆಕೆಯ ಮಗಳ ನಾಟ್ಯ, ಆ ಯೋಜನೆಯ ಒಂದು ಭಾಗ; ಹೆರೋದ್ಯಳು ತನ್ನ ಗಂಡನ ದುರಾಶೆಯನ್ನು ಅರಿತಿದ್ದಳು. [39]ಇಂಥಹ ಕಾಣಿಕೆಯ ಸ್ವರೂಪ, ಪೂರ್ವದವರಿಗೆ ಅಚ್ಚರಿ ಮೂಡುತ್ತದೆ (ನೋಡಿ ಎಸ್ತೆರ 5:3, 6; 7:2) ಇಂಥದ್ದನು ದುರುಪಯೋಗ ಮಾಡಿದರ ಬಗ್ಗೆ ಜನರಿಗೆ ಬೇಸರವಿತ್ತು. [40]ಮದುವೆಯಾಗಲಿದ್ದ ಒಬ್ಬ ಯುವಕನಿಗೆ ಹವಾರ್ಡ್ ಹ ಎಂಬ ಲಕ್ಷಾಧಿಪತಿಯು, "ಅವನಿಗೆ ಬೇಕಾದದ್ದನ್ನು ನೀಡಲು ಮುಂದಾದನು." ಆ ಯುವಕನು ಒಬ್ಬ ಸುವಾರ್ತಿಕನ ಮಗನಾಗದ್ದನು. ಈ ದೃಷ್ಟಾಂತದಿಂದ ಪ್ರಸಂಗಿಗಳು, ಹವಾರ್ಡ್ ಹ್ರೂ ನಿಮಗೆ ಈ ಹೇಳಕೆಯನ್ನು ಕೇಳಿದ್ದರೆ ನೀವು ಏನನ್ನು ಕೇಳುತ್ತಿದ್ದೀರಿ? ಕಥೆಯ ಪ್ರಕಾರ ಯುವಕನು ಬೆಳ್ಳಿಯ ಪಾತ್ರೆಗಳನ್ನು ಕೇಳಿದನು.

[41]ಏನನ್ನು ಕೇಳಬೇಕೆಂದು ಸಲೋಮೆಯ ಈಗಾಗಲೇ ನಿರ್ದರಿಸಿದ್ದಳು ಎಂದು ಲೂಕನು ತಿಳಿಸಿದರೆ, ಸಲೋಮೆಯು ತನ್ನ ತಾಯಿಯ ಬಳಿ ಹೋಗಿ ಆಲೋಚನೆ ಕೇಳಿದರು ಎಂದು ಮಾರ್ಕನು ತಿಳಿಸುವನು (ಮಾರ್ಕ 6:24). ಆ ಮಾಹಿತಿಯ ಅತಿ ಅಗತ್ಯವಿಲ್ಲ. [42]ಭಯಂಕರರು ಇತರರಲ್ಲೂ ಭಯಂಕರವನ್ನು ಕಾಣುತ್ತಾರೆ. [43]ಯೇಸುವಿನ ಜನನದ ಕುರಿತು ಅವನ ತಂದೆಯಾದ ಹೆರೋದ ಮಹಾರಾಜನ ಪ್ರತಿಕ್ರಿಯೆ ಗಮನಿಸಿ (ಮತ್ತಾಯ 21:3, 13). [44]ಪ್ರಾಯಶಃ ಕೆಪೆರ್ನೌಮಿನಿಂದ ಹಿಂದಿರುಗಿದ್ದರು. ಯೇಸುವಿನ ಪ್ರಯಾಣ ಹಾಗೂ ಚಟುವಟಿಕೆಯ ಸ್ಥಳ. [45]ಮಾರ್ಕ 3:20ಕ್ಕೆ ಹೋಲಿಸಿರಿ. [46]ಯೇಸು "ವಿಂಗಡವಾಗಿ … ಹೋದನು" (ಮತ್ತಾಯ 14:13) ಎಂದು ಮತ್ತಾಯ ಸುವಾರ್ತೆಯು ಹೇಳುತ್ತದೆ, ಮಾರ್ಕನ ಸುವಾರ್ತೆಯು ಹೀಗೆ ಹೇಳುತ್ತದೆ, "ಅವರು [ಕ್ರಿಸ್ತನು ಮತ್ತು ಅಪೊಸ್ತಲರು] … ಹೊರಟು ವಿಂಗಡವಾಗಿ ಅಡವಿಗೆ ಹೋದರು" (ಮಾರ್ಕ 6:32). ಈ ಎರಡು ವಿಷಯಗಳನ್ನು ಲೂಕನು ಸೇರಿಸಿದನು: "ಆತನು (ಯೇಸು) ಅವರನ್ನು (ಅಪೊಸ್ತಲರನ್ನು) … ವಿಂಗಡವಾಗಿ ಕರಕೊಂಡು ಹೋದನು" (ಲೂಕ 9:10). [47]ಯೇಸು ತನ್ನ ಶಿಷ್ಯರೊಂದಿಗೆ, ಗುಣಮಟ್ಟದ ಸಮಯವನ್ನು ಕಳೆದನು. [48]ಹಿಂದಿನ ಪ್ರಯಾಣದ ಕುರಿತು ಮಾರ್ಕ 4:35-5:21ನ್ನು ಓದಿರಿ. [49]ಪುರಾವೆ ಲೂಕ 9:10ರಲ್ಲಿದೆ. ಯೇಸು ಮತ್ತು ಶಿಷ್ಯರು ಸಮುದ್ರದ ಪೂರ್ವಭಾಗದ ಬೆತ್ಸಾಯಿದಕ್ಕೆ ಹೋದರು. ಅಲ್ಪ ಸಮಯದ ನಂತರ ಅವರನ್ನು ಬೆತ್ಸಾಯಿದಕ್ಕೆ ಕಳುಹಿಸಿದನು ಸಮುದ್ರದ ಇನ್ನೊಂದು ಭಾಗ (ಮಾರ್ಕ 6:45). [50]ಪಿಲಿಪ್ಪನು ಬೆತ್ಸಾಯದವನು (ಅಪೋಸ್ತಲ) (ಯೋಹಾನ 1:44; 12:21). ಅದು ಪೇತ್ರ ಮತ್ತು ಆಂಡ್ರೆಯರ ಸ್ಥಳವೂ ಆಗಿತ್ತು (ಯೋಹಾನ 1:44). ಕಪೆರ್ನೌಮಿನ ಬಳಿ, ಯೂರ್ದಾನಿನ ಪಶ್ಚಿಮ ಪರದೇಶ.

[51]ಯೇಸುವಿನ ಕಾಲದಭೂಪಟವನ್ನು ನೋಡಿ.